ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
Bangalore Development Authority

000165

ಸಂಖ್ಯೆ No. : ಬೆಂಅಪ್ರಾ/ನಯೋಸ/PRL-24/2018-19/ 364 /2019-20.

ದಿನಾಂಕ Date : 06/06/2019

# ಕಾರ್ಯಾದೇಶ

ವಿಷಯ:- ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಹೆಬ್ಬಗೋಡಿ ಗ್ರಾಮದ ಸರ್ವೆ ನಂ.121/24 ರಲ್ಲಿ 0ಎ-08ಗುಂಟೆ, ಸರ್ವೆ ನಂ.121/25 ರಲ್ಲಿ 0ಎ-23ಗುಂಟೆ, ಸರ್ವೆ ನಂ.121/26 ರಲ್ಲಿ 01ಎ-29ಗುಂಟೆ ಪೈಕಿ 0ಎ-02ಗುಂಟೆ ಖರಾಬು ಕಳೆದು 01ಎ-27ಗುಂಟೆ, ಸರ್ವೆ ನಂ.121/29 ರಲ್ಲಿ 0ಎ-22.50ಗುಂಟೆ, ಸರ್ವೆ ನಂ.121/30 ರಲ್ಲಿ 0ಎ-23ಗುಂಟೆ ಪೈಕಿ 0ಎ-01ಗುಂಟೆ ಖರಾಬು ಕಳೆದು 0ಎ-22ಗುಂಟೆ ಒಟ್ಟು 03ಎಕರೆ 25.5ಗುಂಟೆ ಪೈಕಿ ಖರಾಬು 0ಎ-03ಗುಂಟೆ ಕಳೆದು 03ಎಕರೆ 22.5ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಖಾಸಗಿ ವಸತಿ ಬಡಾವಣೆ ನಕ್ಷೆ ಅನುಮೋದನೆ ನೀಡುವಂತೆ M/S. India Build Realty Pvt. Ltd. ರವರು ಕೋರಿರುವ ಕುರಿತು.

ಉಲ್ಲೇಖ

1. ಅರ್ಜಿದಾರರ ಪತ್ರ ದಿನಾಂಕ 31.01.2019.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 52/2019, ದಿನಾಂಕ 26.02.2019.
4. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-24/2018-19/190/2019-20, ದಿನಾಂಕ 14.05.2019.
5. ಕೆನರಾ ಬ್ಯಾಂಕ್ ಚಲನ್ ನಂ. 3211, ದಿನಾಂಕ 16.05.2019 ಮತ್ತು ಆರ್ಥಿಕ ವಿಭಾಗದವರು ದೃಢೀಕರಿಸಿದ ದಿನಾಂಕ 22/05/2019.
6. ಈ ಕಛೇರಿ ಅನೌಪಚಾರಿಕ ಟಿಪ್ಪಣಿ ಸಂಖ್ಯೆ ಬೆಂಅಪ್ರಾ/ನಯೋಸ/PRL-24/2018-18/203/2019-20, ದಿನಾಂಕ 16.05.2019.
7. ಅಧಿಕ ಜಿಲ್ಲಾ ನೊಂದಣಾದಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಅಪ್ರಾ ರವರ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ ತಿದ್ದುಪಡಿ ಪರಿತ್ಯಾಜನಾ ಪತ್ರ BDA-1-00820-2019-20, ಸಿ.ಡಿ. ನಂ. BDAD346, ದಿನಾಂಕ 29.05.2019.
8. ಕಾವೇರಿ ನೀರಿನ ಕರ, ವರ್ತುಲ ರಸ್ತೆ ಮೇಲುಕರ, ಎಂ.ಆರ್.ಟಿ.ಎಸ್. ಕರ, ಮೆಟ್ರೋ ಕರ ಮತ್ತು ವಿವಿಧ ಶುಲ್ಕಗಳ ಪರಿಷ್ಕೃತ ದರವನ್ನು ಪಾವತಿಸುವ ಸಂಬಂಧ ಸರ್ಕಾರದ ಅಂತಿಮ ತೀರ್ಮಾನಕ್ಕೆ ಬದ್ಧರಿರುವುದಾಗಿ ದಿನಾಂಕ 22.05.2019 ರಂದು ನೋಟರೈಸ್ಡ್ ಪ್ರಮಾಣ ಪತ್ರ ಸಲ್ಲಿಸಿರುವುದು.

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಹೆಬ್ಬಗೋಡಿ ಗ್ರಾಮದ ಸರ್ವೆ ನಂ.121/24 ರಲ್ಲಿ ೦ಎ-08ಗುಂಟೆ, ಸರ್ವೆ ನಂ.121/25 ರಲ್ಲಿ ೦ಎ-23ಗುಂಟೆ, ಸರ್ವೆ ನಂ.121/26 ರಲ್ಲಿ 01ಎ-29ಗುಂಟೆ ಪೈಕಿ ೦ಎ-02ಗುಂಟೆ ಖರಾಬು ಕಳೆದು 01ಎ-27ಗುಂಟೆ, ಸರ್ವೆ ನಂ.121/29 ರಲ್ಲಿ ೦ಎ-22.50ಗುಂಟೆ, ಸರ್ವೆ ನಂ.121/30 ರಲ್ಲಿ ೦ಎ-23ಗುಂಟೆ ಪೈಕಿ ೦ಎ-01ಗುಂಟೆ ಖರಾಬು ಕಳೆದು ೦ಎ-22ಗುಂಟೆ ಒಟ್ಟು 03ಎಕರೆ 25.5ಗುಂಟೆ ಪೈಕಿ ಖರಾಬು ೦ಎ-03ಗುಂಟೆ ಕಳೆದು 03ಎಕರೆ 22.5ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ತಾತ್ಕಾಲಿಕ ವಸತಿ ಬಡಾವಣೆ ನಕ್ಷೆ ಅನುಮೋದಿಸುವಂತೆ M/S. India Build Realty Pvt. Ltd. ರವರು ಉಲ್ಲೇಖ (1) ರಲ್ಲಿ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಉಲ್ಲೇಖ [2] ರಂತೆ ದಿನಾಂಕ 26.02.2019 ರಂದು ನಡೆದ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಸಂಖ್ಯೆ 52/2019 ರಲ್ಲಿ ಮಂಡಿಸಿ ಚರ್ಚಿಸಲಾಯಿತು. ಚರ್ಚೆಯ ನಂತರ RMP-2015 ರಂತೆ ಕೈಗಾರಿಕೆ [ಹೈಟೆಕ್] ವರ್ಗೀಕರಣದಲ್ಲಿದ್ದ ಪ್ರಶ್ನಿತ ಪ್ರದೇಶವನ್ನು ವಸತಿ ಉದ್ದೇಶಕ್ಕೆ KTCP ಕಾಯ್ದೆ 1961 ರ ಕಲಂ 14[ಎ][3] ರ Deemed permission ರಡಿಯಲ್ಲಿ ಮಾನ್ಯ ಆಯುಕ್ತರು ಭೂ ಉಪಯೋಗ ಬದಲಾವಣೆ ನೀಡಿ ದಿನಾಂಕ 01.02.2013 ಮತ್ತು 18.11.2014 ರಲ್ಲಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿರುತ್ತದೆ. ಹಾಗೂ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರು ವ್ಯವಸಾಯೇತರ ಕೈಗಾರಿಕೆ [ಹೈಟೆಕ್] ಉದ್ದೇಶಕ್ಕೆ ಭೂ ಪರಿವರ್ತನೆ ಮಂಜೂರು ಆಗಿರುವುದನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕೆ ಪರಿಷ್ಕೃತ ಜ್ಞಾಪನಾ ಪತ್ರವನ್ನು ದಿನಾಂಕ 03.07.2013 ರಂದು ನೀಡಿರುತ್ತಾರೆ. ಅರ್ಜಿದಾರರು ವಸತಿ ಬಡಾವಣೆ ನಕ್ಷೆಯಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ [NGT] ಆದೇಶದಂತೆ ನಾಲಾಗೆ Buffer ಅಳವಡಿಸಿ ಸಲ್ಲಿಸಿರುವ ನಕ್ಷೆಯು RMP-2015 ರ ವಲಯ ನಿಯಮಾವಳಿಗಳಿಗೆ ಅನುಗುಣವಾಗಿದ್ದು, ನಕ್ಷೆ ಅನುಮೋದಿಸುವ ಅಧಿಕಾರವನ್ನು ಮಾನ್ಯ ಆಯುಕ್ತರಿಗೆ ಪ್ರತ್ಯಾಯೋಜಿಸಿ, ಸಾಮಾನ್ಯ ಷರತ್ತುಗಳಿಗೊಳಪಡಿಸಿ ವಸತಿ ಬಡಾವಣೆ ನಕ್ಷೆಗೆ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.

ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ತೀರ್ಮಾನದಂತೆ ವಸತಿ ಬಡಾವಣೆ ನಕ್ಷೆ ಅನುಮೋದನೆ ಸಂಬಂಧ ಪ್ರಸ್ತುತ ಅರ್ಜಿದಾರರಿಗೆ ಉಲ್ಲೇಖ [4] ರ ಈ ಕಛೇರಿ ಪತ್ರದಲ್ಲಿ ವಿವಿಧ ಶುಲ್ಕಗಳ ಬಾಬ್ತು ₹. 04,79,700/- [₹. ನಾಲ್ಕು ಲಕ್ಷದ ಎಪ್ಪತ್ತೊಂಭತ್ತು ಸಾವಿರದ ಏಳುನೂರು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ದಿನಾಂಕ 14.05.2019 ರಂದು ತಿಳಿಸಲಾಗಿತ್ತು.

ಅದರಂತೆ ಉಲ್ಲೇಖ [5] ರಲ್ಲಿ ಅರ್ಜಿದಾರರು ದಿನಾಂಕ **16.05.2019** ರಂದು ₹. 04,79,700/- [₹. ನಾಲ್ಕು ಲಕ್ಷದ ಎಪ್ಪತ್ತೊಂಭತ್ತು ಸಾವಿರದ ಏಳುನೂರು ಮಾತ್ರ] ಗಳನ್ನು ಕೆನರಾ ಬ್ಯಾಂಕ್, ಕುಮಾರ ಪಾರ್ಕ್ ಬೆಂಗಳೂರು ಚಲನ್ ನಂ. 3211 ರ ಮೂಲಕ ಪಾವತಿಸಿರುತ್ತಾರೆ. ಸದರಿ ಮೊತ್ತವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂದಾಯವಾಗಿರುವ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 22.05.2019 ರಂದು ದೃಢೀಕರಿಸಿರುತ್ತಾರೆ.

ಉಲ್ಲೇಖ [6] ರಲ್ಲಿ ತಾತ್ಕಾಲಿಕ ಕರಡು ವಸತಿ ಬಡಾವಣೆ ನಕ್ಷೆಯಲ್ಲಿನ ಉದ್ಯಾನವನ / ಬಯಲುಜಾಗಗಳು ಮತ್ತು ರಸ್ತೆ ಪ್ರದೇಶಗಳನ್ನು ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸುವಂತೆ ಕಾರ್ಯಪಾಲಕ ಅಭಿಯಂತರರು [ದಕ್ಷಿಣ ವಿಭಾಗ] ಇವರಿಗೆ ದಿನಾಂಕ 16.05.2019 ರಂದು ತಿಳಿಸಲಾಗಿತ್ತು.

ಉಲ್ಲೇಖ [7] ರಲ್ಲಿ ಕಾರ್ಯಪಾಲಕ ಅಭಿಯಂತರರು [ದಕ್ಷಿಣ ವಿಭಾಗ], ಇವರು ತಾತ್ಕಾಲಿಕ ಕರಡು ವಸತಿ ಬಡಾವಣೆ ನಕ್ಷೆಯಲ್ಲಿನ ಉದ್ಯಾನವನ / ಬಯಲುಜಾಗಗಳು, ರಸ್ತೆ ಪ್ರದೇಶ ಮತ್ತು Public Utilities ಪ್ರದೇಶಗಳನ್ನು ದಿನಾಂಕ 29.05.2019 ರಂದು ನೋಂದಾಯಿತ ತಿದ್ದುಪಡಿ ಪರಿತ್ಯಜನಾ ಪತ್ರದ ಮೂಲಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಕೊಂಡಿರುವುದಾಗಿ ವರದಿ ನೀಡಿರುತ್ತಾರೆ.

ಉಲ್ಲೇಖ [08] ರ ಪ್ರಕಾರ ಕಾವೇರಿ ನೀರಿನ ಕರ, ವರ್ತುಲ ರಸ್ತೆ ಮೇಲುಕರ, ಮೆಟ್ರೋಕರ, ಎಂ.ಆರ್.ಟಿ.ಎಸ್. ಕರಗಳನ್ನು ಪಾವತಿಸುವ ಸಂಬಂಧ ಸರ್ಕಾರದ ಅಂತಿಮ ತೀರ್ಮಾನಕ್ಕೆ ಬದ್ಧರಿರುವುದಾಗಿ ಹಾಗೂ ಶುಲ್ಕ ಪರಿಷ್ಕರಣೆಯ ಸಂಬಂಧ ಸರ್ಕಾರದ ಆದೇಶಕ್ಕೆ ಬದ್ಧರಿರುವುದಾಗಿ ಛಾಪಾ ಕಾಗದದಲ್ಲಿ ನೋಟರಿಯವರಿಂದ ದೃಢೀಕರಿಸಿದ ನೋಟರೈಸ್ಡ್ ಪ್ರಮಾಣ ಪತ್ರವನ್ನು ದಿನಾಂಕ 22.05.2019 ರಂದು ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಹೆಬ್ಬಗೋಡಿ ಗ್ರಾಮದ ಸರ್ವೆ ನಂ.121/24 ರಲ್ಲಿ 0ಎ-08ಗುಂಟೆ, ಸರ್ವೆ ನಂ.121/25 ರಲ್ಲಿ 0ಎ-23ಗುಂಟೆ, ಸರ್ವೆ ನಂ.121/26 ರಲ್ಲಿ 01ಎ-29ಗುಂಟೆ ಪೈಕಿ 0ಎ-02ಗುಂಟೆ ಖರಾಬು ಕಳೆದು 01ಎ-27ಗುಂಟೆ, ಸರ್ವೆ ನಂ.121/29 ರಲ್ಲಿ 0ಎ-22.50ಗುಂಟೆ, ಸರ್ವೆ ನಂ.121/30 ರಲ್ಲಿ 0ಎ-23ಗುಂಟೆ ಪೈಕಿ 0ಎ-01ಗುಂಟೆ ಖರಾಬು ಕಳೆದು 0ಎ-22ಗುಂಟೆ ಒಟ್ಟು 03ಎಕರೆ 25.5ಗುಂಟೆ ಪೈಕಿ ಖರಾಬು 0ಎ-03ಗುಂಟೆ ಕಳೆದು 03ಎಕರೆ 22.5ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ತಾತ್ಕಾಲಿಕ ವಸತಿ ಬಡಾವಣೆ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದಿಸಲಾಗಿದೆ.

| | |
|---|---|
| 1 | ಈ ಹಿಂದೆ ದಿನಾಂಕ 25.09.2018 ರಂದು ನೀಡಿರುವ ವಸತಿ ಕಟ್ಟಡ ನಕ್ಷೆ ಅನುಮೋದನೆಯು ರದ್ದಾಗುತ್ತದೆ. |
| 2 | ತಾತ್ಕಾಲಿಕ ವಸತಿ ಬಡಾವಣೆ ನಕ್ಷೆಯಂತೆ ವಿವಿಧ ಅಳತೆಯ ಒಟ್ಟು 54 ಸಂಖ್ಯೆ ವಸತಿ ನಿವೇಶನಗಳಿದ್ದು, ಅದರಲ್ಲಿ 5 ನಿವೇಶನಗಳನ್ನು EWS ಗಾಗಿ ಕಾಯ್ದಿರಿಸಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪೂರ್ವಾನುಮೋದನೆ ಇಲ್ಲದೇ ನಿವೇಶನಗಳ ಅಳತೆ ಹಾಗೂ ನಿವೇಶನಗಳ ಒಟ್ಟು ಸಂಖ್ಯೆಯನ್ನು ಅನುಮೋದಿತ ಬಡಾವಣೆ ನಕ್ಷೆಯಲ್ಲಿ ಬದಲಾಯಿಸತಕ್ಕದ್ದಲ್ಲ. |
| 3 | ಅನುಮೋದಿತ ತಾತ್ಕಾಲಿಕ ವಸತಿ ಬಡಾವಣೆ ನಕ್ಷೆಯಂತೆಯೇ ಬಡಾವಣೆ ಕಾರ್ಯಗಳನ್ನು ಕಾರ್ಯಗತ ಮಾಡುವುದು, ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆ ಮಾಡುವಂತಿಲ್ಲ. ಬಡಾವಣೆಯನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಿದ ನಂತರ ಅಂತಿಮ ವಸತಿ ಬಡಾವಣೆ ನಕ್ಷೆಯನ್ನು ಪ್ರಾಧಿಕಾರದಿಂದ ಅನುಮೋದನೆ ಪಡೆದು, ವಸತಿ ನಿವೇಶನಗಳನ್ನು ಬಿಡುಗಡೆ ಮಾಡಿಸಿಕೊಳ್ಳುವುದು. |

| | |
|---|---|
| 4 | ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೂ ಕುಡಿಯುವ ನೀರು, ತ್ಯಾಜ್ಯ ನೀರು ವಿಲೇವಾರಿ, ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸತಕ್ಕದ್ದು ಹಾಗೂ ಉದ್ದೇಶಿತ ವಸತಿ ವಿನ್ಯಾಸದಲ್ಲಿ ಅರ್ಜಿದಾರರು ಕಡ್ಡಾಯವಾಗಿ ಮಳೆನೀರು ಕೊಯ್ಲಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ಉದ್ದೇಶಿತ ಒಟ್ಟು ಕ್ಷೇತ್ರದಲ್ಲಿ ಬೀಳುವ ಮಳೆ ನೀರು ವ್ಯರ್ಥವಾಗಿ ಹೊರಗೆ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ನಿವೇಶನಗಳ ಬಿಡುಗಡೆ ವೇಳೆ ಅಭಿಯಂತರ ವಿಭಾಗಕ್ಕೆ ಸಲ್ಲಿಸತಕ್ಕದ್ದು. |
| 5 | ಉದ್ಯಾನವನ / ಬಯಲುಜಾಗಗಳನ್ನು ಅನುಮೋದಿತ ನಕ್ಷೆ ಪ್ರಕಾರ ಶೇ.100 ರಷ್ಟು ನಿವೇಶನಗಳ ಬಿಡುಗಡೆಗೊಳಿಸುವ ಮೊದಲು Chain Link Fencing ಮಾಡಿ ಅಳವಡಿಸುವುದು ಹಾಗೂ ಅಭಿವೃದ್ಧಿಪಡಿಸುವುದು. |
| 6 | ತಾತ್ಕಾಲಿಕ ವಸತಿ ಬಡಾವಣೆ ನಕ್ಷೆಯಲ್ಲಿ ತೋರಿಸಿರುವ ರಸ್ತೆ ಅಗಲಗಳನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡಬಾರದು. |
| 7 | ತಾತ್ಕಾಲಿಕ ವಸತಿ ಬಡಾವಣೆ ನಕ್ಷೆಯಂತೆ ರಸ್ತೆಗಳು, ಹಾಲಿ ರಸ್ತೆ ವಿಸ್ತರಣಾ ಪ್ರದೇಶ, ಉದ್ಯಾನವನ / ಬಯಲುಜಾಗಗಳನ್ನು ಮತ್ತು Public Utility ಪ್ರದೇಶಗಳನ್ನು ನೋಂದಾಯಿತ ಪರಿತ್ಯಜನಾ ಪತ್ರದ ಮುಖಾಂತರ ಪುಕ್ಕಟೆಯಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವುದು. |
| 8 | ಬಫರ್ ಪ್ರದೇಶದಲ್ಲಿ ಗಿಡಮರಗಳನ್ನು ಬೆಳಸತಕ್ಕದ್ದು. |
| 9 | ಅರ್ಜಿದಾರರು ಉದ್ದೇಶಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಖಾಸಗಿ ಸಂಘ / ವ್ಯಕ್ತಿಗಳ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಅನುಮೋದಿತ ಬಡಾವಣೆ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |
| 10 | ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸುಳ್ಳು ದಾಖಲೆ ಅಥವಾ ಇನ್ನಿತರೆ ಫೋರ್ಜರಿ ದಾಖಲಾತಿಗಳನ್ನು ನೀಡಿರುವುದು ಕಂಡುಬಂದಲ್ಲಿ ಈಗ ನೀಡಿರುವ ಬಡಾವಣೆ ನಕ್ಷೆ ಅನುಮೋದನೆಯು ತನ್ನಿಂತಾನೇ ರದ್ದಾಗುವುದೆಂದು ಭಾವಿಸತಕ್ಕದ್ದು. |
| 11 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು. |
| 12 | ಪ್ರಸ್ತಾಪಿತ ವಿನ್ಯಾಸದಲ್ಲಿ ಘನತ್ಯಾಜ್ಯಗಳನ್ನು ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು. |
| 13 | ವಸತಿ ವಿನ್ಯಾಸದಲ್ಲಿನ ಎಲ್ಲಾ ರಸ್ತೆಗಳನ್ನು IRC Specification ಪ್ರಕಾರ ಅಭಿವೃದ್ಧಿ ಪಡಿಸತಕ್ಕದ್ದು, ಅದಕ್ಕೂ ಮುಂಚೆ ಅಂದಾಜುಪಟ್ಟಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿಯಂತರ ವಿಭಾಗದಿಂದ ಅನುಮೋದಿಸಿಕೊಳ್ಳತಕ್ಕದ್ದು, ರಸ್ತೆ ಅಭಿವೃದ್ಧಿ ಪಡಿಸುವ ಸಮಯದಲ್ಲಿ ಅಭಿಯಂತರ ವಿಭಾಗದಿಂದ ಸ್ಥಳ ಪರಿಶೀಲನೆಗಾಗಿ ಮತ್ತು ಕಾಮಗಾರಿ ಪರಿಶೀಲನೆಗೆ ಅನುವುಮಾಡಿಕೊಡತಕ್ಕದ್ದು. |

| | |
|---|---|
| 14 | ಬಡಾವಣೆಯನ್ನು ಪೂರ್ಣವಾಗಿ ಅಭಿವೃದ್ಧಿಗೊಳಿಸಿದ ನಂತರ ಅಂತಿಮ ಬಡಾವಣೆ ನಕ್ಷೆ ಅನುಮೋದನೆಯನ್ನು ಮತ್ತು ವಸತಿ ನಿವೇಶನಗಳನ್ನು ಬಿಡುಗಡೆ ಮಾಡಿಸಿಕೊಳ್ಳತಕ್ಕದ್ದು. |
| 15 | ಸರ್ಕಾರದ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ 10/09/2015 ರನ್ವಯ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಪಡಿಸಿದ ನಂತರ ಅಂತಿಮವಾಗಿ ವಿನ್ಯಾಸವನ್ನು ಬಿಡುಗಡೆಗೊಳಿಸುವುದು. |
| 16 | ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡುವ ಪೂರ್ವಭಾವಿಯಾಗಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯತಕ್ಕದ್ದು. |
| 17 | ಸಿವಿಲ್ ಕಾಮಗಾರಿ ಕೆಲಸಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ಅರ್ಜಿದಾರರೇ ಕಾರ್ಯಗತ ಮಾಡತಕ್ಕದ್ದು. ಸಿವಿಲ್ ಕಾಮಗಾರಿ ಕೆಲಸಕ್ಕೆ BWSSB ಯವರಿಂದ ಸಂಸ್ಕರಿಸಿದ ನೀರನ್ನು ಖರೀದಿಸಿ ಉಪಯೋಗಿಸತಕ್ಕದ್ದು. |
| 18 | ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲುಜಾಗ / ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಉಳಿದ ಬಳಕೆಗಾಗಿ ಬಳಸತಕ್ಕದ್ದು. |
| 19 | ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೆ ಗೃಹ ಬಳಕೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಗಾಗಿ ಪ್ರತ್ಯೇಕ ಕೊಳವೆಗಳನ್ನು ಒದಗಿಸತಕ್ಕದ್ದು. ಅಂದರೆ ಕುಡಿಯುವ ನೀರು ಮತ್ತು ಇತರೆ ಉಪಯೋಗಗಳಿಗೆ Dual Piping System ಅಳವಡಿಸುವುದು. |
| 20 | ಅರ್ಜಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು. ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು. ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. |
| 21 | ಬೆಸ್ಕಾಂ ನಿರ್ದೇಶನದಂತೆ ಬಡಾವಣೆಯಲ್ಲಿ ವಿದ್ಯುಚ್ಛಕ್ತಿ ಅಳವಡಿಸಲು ಕ್ರಮಕೈಗೊಳ್ಳತಕ್ಕದ್ದು. |
| 22 | ಕಾವೇರಿ ನೀರಿನ ಕರ, ವರ್ತುಲ ರಸ್ತೆ ಮೇಲು ಕರ, MRTS ಕರ ಮತ್ತು ಮೆಟ್ರೋ ಕರ ಪಾವತಿಸುವ ಸಂಬಂಧ ಹಾಗೂ ವಿವಿಧ ಶುಲ್ಕಗಳ ಪರಿಷ್ಕೃತ ದರವನ್ನು ಪಾವತಿಸುವ ಸಂಬಂಧ ಸರ್ಕಾರದ ಅಂತಿಮ ತೀರ್ಮಾನಕ್ಕೆ ಬದ್ಧರಿರತಕ್ಕದ್ದು ಹಾಗೂ ಈ ಸಂಬಂಧ ನೊಟರೈಸಡ್ ಪ್ರಮಾಣ ಪತ್ರವನ್ನು ಅರ್ಜಿದಾರರು ಸಲ್ಲಿಸತಕ್ಕದ್ದು. |
| 23 | ಸದರಿ ವಸತಿ ವಿನ್ಯಾಸದಲ್ಲಿ ಪ್ರಾಧಿಕಾರದ ದಿನಾಂಕ 08.11.2010 ರ ಸುತ್ತೋಲೆಯಂತೆ ಒಟ್ಟು ವಸತಿ ನಿವೇಶನಗಳ ಶೇ. 10 ರಷ್ಟು ವಸತಿ ನಿವೇಶನಗಳನ್ನು [EWS] ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಮತ್ತು [LIG] ಕಡಿಮೆ ಆದಾಯ ವರ್ಗದವರಿಗಾಗಿ ಕಾಯ್ದಿರಿಸತಕ್ಕದ್ದು, [EWS] ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಕಾಯ್ದಿರಿಸಿದ ನಿವೇಶನಗಳನ್ನು ಒಂದುಗೂಡಿಸಿ ದೊಡ್ಡ ಅಳತೆಯ ನಿವೇಶನವನ್ನಾಗಿ ಸಮಾಮೇಲನಾ ಮಾಡಿದಲ್ಲಿ ಮೂಲ ಆಶಯ ವಿಫಲವಾಗುವುದರಿಂದ [EWS] ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಕಾಯ್ದಿರಿಸಿದ ವಸತಿ ನಿವೇಶನಗಳನ್ನು ಸಮಾಮೇಲನಾ ಮಾಡತಕ್ಕದ್ದಲ್ಲ. |
| 24 | ಅಂತಿಮ ಬಡಾವಣೆ ನಕ್ಷೆ ಅನುಮೋದನೆ ಮತ್ತು ವಸತಿ ನಿವೇಶನಗಳ ಬಿಡುಗಡೆಗೆ ಮೊದಲು BESCOM, KSPCB ಮತ್ತು BWSSB ಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸತಕ್ಕದ್ದು. |

| | |
|---|---|
| 25 | ಬಡಾವಣೆ ನಕ್ಷೆಯಲ್ಲಿ Sewage Treatment Plant, RWH, SWM, Transformer Yard ಗೆ ಸೂಕ್ತ ಜಾಗಗಳನ್ನು ಕಾಯ್ದಿರಿಸಿದ್ದು, ಇವುಗಳನ್ನು ಬದಲಾಯಿಸುವಂತಿಲ್ಲ. ಹಾಗೂ ಸಂಬಂಧಪಟ್ಟ ಸಂಸ್ಥೆಯ ಅಭಿಪ್ರಾಯದಂತೆ ಅಭಿವೃದ್ಧಿಪಡಿಸುವುದು. |
| 26 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು. |

ಆಯುಕ್ತರು,
ಬೆಂಅಪ್ರಾ, ಬೆಂಗಳೂರು

ಇವರಿಗೆ,

M/S. India Build Realty Pvt. Ltd.,
N-6/A, 2nd Floor, Kabra Excelsior,
80 Feet road, Koramangala,
Bangalore – 560 034.